## ಪ್ರಾರ್ಥನೆ

# ಶ್ರೀಕೃಷ್ಣ ಸ್ತುತಿಯಿಂದ



**ಕೃಷಿರ್ಭೂವಾಚಕಃ ಶಬ್ದೋ ನಶ್ಚ ನಿರ್ವೃತಿವಾಚಕಃ ।**
**ತಯೋರೈಕ್ಯಂ ಪರಂ ಬ್ರಹ್ಮ ಕೃಷ್ಣ ಇತ್ಯಭಿಧೀಯತೇ ॥ ೧ ॥**

'ಕೃಷ್' ಎಂಬುದು ಸತ್ ಎಂದರೆ ಇರುವಿಕೆಯನ್ನೂ, 'ನ' ಎಂಬುದು ಆನಂದವನ್ನೂ ಸೂಚಿಸುತ್ತವೆ. ಇವೆರಡೂ ಒಟ್ಟುಸೇರಿದಾಗ ಪರಬ್ರಹ್ಮನಾದ ಕೃಷ್ಣ ಎಂಬ ಅರ್ಥವನ್ನು ಕೊಡುವುದು.

**ಸಚ್ಚಿದಾನಂದರೂಪಾಯ ಕೃಷ್ಣಾಯಾಕ್ಲಿಷ್ಟಕಾರಿಣೇ ।**
**ನಮೋ ವೇದಾಂತವೇದ್ಯಾಯ ಗುರವೇ ಬುದ್ಧಿಸಾಕ್ಷಿಣೇ ॥ ೨ ॥**

ಸತ್(ಇರುವಿಕೆ), ಚಿತ್(ಜ್ಞಾನ), ಆನಂದ ಸ್ವರೂಪನೂ, ಎಲ್ಲ ಕಠಿಣತೆಯನ್ನೂ ಬಗೆಹರಿಸಿ ಸುಲಭ ಮಾಡಿಕೊಡುವವನೂ, ವೇದಾಂತದ ಮೂಲಕ ತಿಳಿಯಲ್ಪಡುವವನೂ, ಸಾಕ್ಷಿರೂಪದಲ್ಲಿದ್ದುಕೊಂಡು ಬುದ್ಧಿಯನ್ನು ಗಮನಿಸುವವನೂ ಆದ ಆ ಜಗದ್ಗುರುವಿಗೆ ನಮಸ್ಕಾರ.

**ನಮೋ ವಿಶ್ವಸ್ವರೂಪಾಯ ವಿಶ್ವಸ್ಥಿತ್ಯಂತಹೇತವೇ ।**
**ವಿಶ್ವೇಶ್ವರಾಯ ವಿಶ್ವಾಯ ಗೋವಿಂದಾಯ ನಮೋ ನಮಃ ॥ ೩ ॥**

ವಿಶ್ವದ ಸ್ವರೂಪನೂ, ವಿಶ್ವದ ಸ್ಥಿತಿ ಹಾಗೂ ಸಂಹಾರಕ್ಕೆ ಕಾರಣನೂ ಆದ, ಸಮಸ್ತ ವಿಶ್ವಕ್ಕೆ ಈಶ್ವರನಾದ, ಇಡೀ ವಿಶ್ವವೇ ತಾನಾಗಿರುವ ಗೋವಿಂದನಿಗೆ ನಮಸ್ಕಾರಗಳು.

**ವೇಣುವಾದನಶೀಲಾಯ ಗೋಪಾಲಾಯಾಹಿಮರ್ದಿನೇ ।**
**ಕಾಲಿಂದೀಕೂಲಲೀಲಾಯ ಲೋಲಕುಂಡಲಧಾರಿಣೇ ॥ ೪ ॥**

ಕೊಳಲನ್ನು ನುಡಿಸುವುದರಲ್ಲಿ ಪ್ರವೀಣನಾದ, ಘೋರ ಕಾಲಿಯನೆಂಬ ಸರ್ಪದ ದರ್ಪವನ್ನು ಮರ್ದಿಸಿದ, ಕಾಳಿಂದೀ ನದಿಯ ತೀರದಲ್ಲಿ ತನ್ನ ಲೀಲೆಯನ್ನು ಮೆರೆದ, ಸದಾ ಅಲುಗಾಡುತ್ತಿರುವ ಕುಂಡಲಗಳನ್ನು ಧರಿಸಿದ (ಶ್ರೀಕೃಷ್ಣನಿಗೆ ನಮಸ್ಕಾರ).

**ನಿಷ್ಕಲಾಯ ವಿಮೋಹಾಯ ಶುದ್ಧಾಯಾಶುದ್ಧವೈರಿಣೇ ।**
**ಅದ್ವಿತೀಯಾಯ ಮಹತೇ ಶ್ರೀಕೃಷ್ಣಾಯ ನಮೋ ನಮಃ ॥ ೫ ॥**

ಅಖಂಡನಾದ, ಮೋಹರಹಿತನಾದ, ಶುದ್ಧನಾದ ಹಾಗೂ ಅಶುದ್ಧವಾದುದಕ್ಕೆ ವೈರಿಯಾದ, ಎರಡಿಲ್ಲದ, ಅತಿಶ್ರೇಷ್ಠನಾದ ಶ್ರೀಕೃಷ್ಣ ಪರಮಾತ್ಮನಿಗೆ ನಮಸ್ಕಾರಗಳು.

**ಪ್ರಸೀದ ಪರಮಾನಂದ ಪ್ರಸೀದ ಪರಮೇಶ್ವರ ।**
**ಆಧಿವ್ಯಾಧಿಭುಜಂಗೇನ ದಷ್ಟಂ ಮಾಮುದ್ಧರ ಪ್ರಭೋ ॥ ೬ ॥**

ಪರಮಾನಂದ ಸ್ವರೂಪನೆ, ಪರಮೇಶ್ವರನೆ, ಪ್ರಸನ್ನನಾಗು. ದುಃಖ, ರೋಗಗಳೆಂಬ ಹಾವುಗಳಿಂದ ನಾನು ಕಡಿಯಲ್ಪಟ್ಟಿದ್ದೇನೆ.

**ಶ್ರೀಕೃಷ್ಣ ರುಕ್ಮಿಣೀಕಾಂತ ಗೋಪೀಜನಮನೋಹರ ।**
**ಸಂಸಾರಸಾಗರೇ ಮಗ್ನಂ ಮಾಮುದ್ಧರ ಜಗದ್ಗುರೋ ॥ ೭ ॥**

ರುಕ್ಮಿಣೀದೇವಿಯ ಪತಿಯಾದ ಹೇ ಶ್ರೀಕೃಷ್ಣನೆ, ಗೋಪಿಕೆಯರ ಮನಸ್ಸನ್ನು ಅಪಹರಿಸಿದವನೆ, ಜಗದ್ಗುರುವೆ, ಸಂಸಾರಸಾಗರದಲ್ಲಿ ಮುಳುಗಿಹೋದ ನನ್ನನ್ನು ಉದ್ಧರಿಸು!

**ಕೇಶವ ಕ್ಲೇಶಹರಣ ನಾರಾಯಣ ಜನಾರ್ದನ ।**
**ಗೋವಿಂದ ಪರಮಾನಂದ ಮಾಂ ಸಮುದ್ಧರ ಮಾಧವ ॥ ೮ ॥**

ಹೇ ಕೇಶವ! ಕ್ಲೇಶಗಳನ್ನು ನಿವಾರಿಸುವವನೆ! ನಾರಾಯಣ! ಜನಾರ್ದನ! ಪರಮಾನಂದಸ್ವರೂಪಿಯಾದ ಗೋವಿಂದ! ಮಾಧವ! ನನ್ನನ್ನು ಉದ್ಧರಿಸು ಪ್ರಭು!

*— ಗೋಪಾಲಪೂರ್ವತಾಪನೀಯೋಪನಿಷತ್*

## ಸೂಕ್ತಿಪ್ರಭ

# ಶ್ರೀಕೃಷ್ಣ ಸೂಕ್ತಿಗಳು

ನೀನು ಕರ್ಮವನ್ನು ಮಾತ್ರ ಮಾಡಲು ಬಯಸಬೇಕು; ಕರ್ಮದ ಫಲದಲ್ಲಿ ನಿನಗೆ ಆಸಕ್ತಿಯಾಗದಿರಲಿ. *(ಗೀತಾ, ೨.೪೭)*

ಕರ್ಮದ ಫಲದಲ್ಲಿ ಆಸಕ್ತಿಯನ್ನು ಬಿಟ್ಟು ಸದಾ ತೃಪ್ತನೂ, ಯಾವ ಆಶ್ರಯವನ್ನೂ ಹೊಂದದವನೂ, ಕರ್ಮದಲ್ಲಿ ನಿರತನಾಗಿದ್ದರೂ ಅವನು ಯಾವ ಕರ್ಮವನ್ನೂ ಮಾಡದಂತೆಯೇ ಸರಿ. *(ಗೀತಾ, ೪.೨೦)*

ಮನಸ್ಸನ್ನು ನಿಗ್ರಹಿಸುವುದು ಅತ್ಯಂತ ಕಷ್ಟ; ಇದರಲ್ಲಿ ಸಂಶಯವಿಲ್ಲ. ಆದರೆ ಅಭ್ಯಾಸದಿಂದ ಮತ್ತು ವೈರಾಗ್ಯದಿಂದ ಅದನ್ನು ಸಾಧಿಸಬಹುದು. *(ಗೀತಾ, ೬.೩೫)*

ಮನಸ್ಸಿನಿಂದಲೇ ತನ್ನನ್ನು ಉದ್ಧರಿಸಿಕೊಳ್ಳಬೇಕು. ತನ್ನನ್ನು ಕುಗ್ಗಿಸಿಕೊಳ್ಳಬಾರದು. ಮನಸ್ಸೇ ತನಗೆ ಬಂಧು; ಮನಸ್ಸೇ ತನ್ನ ಶತ್ರು . *(ಗೀತಾ, ೬.೫)*

ಅನನ್ಯರಾಗಿ ನನ್ನನ್ನು ಧ್ಯಾನಿಸುತ್ತ ಯಾರು ನನ್ನ ಉಪಾಸನೆ ಮಾಡುತ್ತಾರೋ ಅಂತಹ ನಿತ್ಯಯುಕ್ತರಾದ ಭಕ್ತರ ಯೋಗ, ಕ್ಷೇಮ ಎರಡನ್ನೂ ನಾನು ವಹಿಸಿಕೊಳ್ಳುತ್ತೇನೆ. *(ಗೀತಾ, ೯.೨೨)*

ಸಮಸ್ತ ಪ್ರಾಣಿಗಳಲ್ಲೂ ಸಮನಾಗಿರುವ, ನಾಶವಾಗುವ ವಸ್ತುಗಳಲ್ಲೆಲ್ಲ ನಾಶವಾಗದೆ ಇರುವ ಪರಮಾತ್ಮನನ್ನು ಯಾರು ನೋಡುತ್ತಾನೋ ಅವನೇ ನಿಜವಾಗಿ ನೋಡುವವನು. *(ಗೀತಾ, ೧೩.೨೭)*